ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 30–7–2015

## ಪತ್ರಿಕಾ ಪ್ರಕಟಣೆ

### ವಿಧಾನ ಮಂಡಲ ಸುದ್ದಿಗಳು

# ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ, ಮಾಜಿ ಸಚಿವ ವಸಂತ ಸಾಲಿಯಾನ್ ನಿಧನಕ್ಕೆ ವಿಧಾನಸಭೆ ಶ್ರದ್ಧಾಂಜಲಿ

ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಸಭೆಯು ಇಂದು ಸಮಾವೇಶಗೊಳ್ಳುತ್ತಿದ್ದಂತೆ ರಾಜ್ಯ ವಿಧಾನಸಭಾಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪ ಅವರು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಹಾಗೂ ರಾಜ್ಯದ ಮಾಜಿ ಸಚಿವ ವಸಂತ ವಿ. ಸಾಲಿಯಾನ ಅವರ ನಿಧನಕ್ಕೆ ಸಂತಾಪ ಸೂಚಕ ನಿರ್ಣಯ ಮಂಡಿಸಿದರು. ನಂತರ ಅವರು ಮಾತನಾಡಿ ದಿವಂಗತರ ಗುಣಗಾನ ಮಾಡಿದರು.

ಸಂತಾಪಸೂಚಕ ನಿರ್ಣಯ ಕುರಿತಂತೆ ರಾಜ್ಯ ಉನ್ನತ ಶಿಕ್ಷಣ ಖಾತೆಯ ಸಚಿವ ಆರ್.ವಿ. ದೇಶಪಾಂಡೆ, ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್, ಕಂದಾಯ ಸಚಿವ ವಿ. ಶ್ರೀನಿವಾಸ ಪ್ರಸಾದ್, ನಗರಾಭಿವೃದ್ಧಿ ಸಚಿವ ವಿನಯ್‌ಕುಮಾರ್ ಸೊರಕೆ, ಶಾಸಕರುಗಳಾದ ವೈ.ಎಸ್.ವಿ. ದತ್ತ, ಕೆ.ಎಸ್. ಪುಟ್ಟಣ್ಣಯ್ಯ , ಎನ್. ಚಲುವರಾಯಸ್ವಾಮಿ, ಬಿ.ಆರ್. ಪಾಟೀಲ್, ಗೋವಿಂದ ಕಾರಜೋಳ, ಕೆ.ಆರ್. ರಮೇಶ್ ಕುಮಾರ್, ಸಿ.ಟಿ. ರವಿ, ರಾಜು ನಡಹಳ್ಳಿ ಮುಂತಾದವರು ಮಾತನಾಡಿ ಮೃತರ ಗುಣಗಾನ ಮಾಡಿದರು.

ಮಾಜಿ ರಾಷ್ಟ್ರಪತಿ ಡಾ. ಎ.ಪಿ. ಜೆ. ಅಬ್ದುಲ್ ಕಲಾಂ ಅವರ ಕುರಿತು ಮಾತನಾಡಿದ ಶಾಸಕರುಗಳು “ಶರಣ ಸಾವು ಮರಣದಲ್ಲಿ ನೋಡು” , ಅವರು ಮಹಾನ್ ಮಾನಾವತಾವಾದಿ, ಶಾಂತಿ ಧೂತರಾಗಿದ್ದರು. ಅವರ ಬದುಕೇ ಒಂದು ಸಂದೇಶವಾಗಿತ್ತು. ದೇಶ ಕಂಡ ಅಪ್ರತಿಮ ಪ್ರತಿಭಾವಂತ, ದೇಶಬಂಧು ಹಾಗೂ ಜನಕ್ಕೂ ಹತ್ತಿರವಾದ ವಿಜ್ಞಾನಿಯಾಗಿ ಬದುಕು ಬಾಳಿದರು. ಭೂಮಿಯ ಗುಣಕ್ಕೆ, ವ್ಯವಸ್ಥೆಯ ಸದುಪಯೋಗಕ್ಕೆ ಹೃದಯಾಂತರಾಳದ ವ್ಯಕ್ತಿಯಾಗಿದ್ದರು. ಸಾವಿನ ಮೌಲ್ಯ ಹೆಚ್ಚಿಸಿದವರು

ಡಾ. ಅಬ್ದುಲ್ ಕಲಾಂ. ಸಾವಿನೊಂದಿಗೆ ಪುಣ್ಯದ ಮೂಟೆಗಳನ್ನು ಹೊತ್ತು ಹೋಗಿದ್ದಾರೆ ಎಂದು ದಿವಂತರ ಗುಣಗಾನ ಮಾಡಿದರು.

ನಂತರ ವಿಧಾನಸಭೆಯ ಎಲ್ಲಾ ಸದಸ್ಯರು ಎದ್ದು ನಿಂತು ಮೌನ ಆಚರಿಸಿ ದಿವಂಗತರಿಗೆ ಗೌರವ ಸಲ್ಲಿಸಿದರು.

ಬಾಬು:ಜಿಪಿಆರ್.

## ರಾಜ್ಯ ವಿಧಾನಸಭೆಯಲ್ಲಿ ಲೋಕಾಯುಕ್ತ ಮಸೂದೆ ಕುರಿತ ಚರ್ಚೆ ಆರಂಭ

ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)

ಇಂದು ರಾಜ್ಯ ವಿಧಾನಸಭೆಯಲ್ಲಿ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ – 2015 ಕುರಿತಂತೆ ವಿಸ್ತೃತ ಚರ್ಚೆ ಆರಂಭಗೊಂಡಿತು. ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ಅವರು ಚರ್ಚೆಯನ್ನು ಆರಂಭಿಸಿದರು.

ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕದಲ್ಲಿರುವ ಉದ್ದೇಶ ಮತ್ತು ಕಾರಣಗಳು ಹೀಗಿವೆ.

ಈ ವಿಧೇಯಕವು ಲೋಕಾಯುಕ್ತರ ಹಾಗೂ ಉಪ ಲೋಕಾಯುಕ್ತರ ನೇಮಕಾತಿಗೆ ಸಂಬಂಧಿಸಿದ ಅರ್ಹತಾ ಮಾನದಂಡಗಳನ್ನು ಪರಿಷ್ಕರಿಸುವುದಕ್ಕೆ, ಲೋಕಾಯುಕ್ತರ ಅಥವಾ ಉಪ ಲೋಕಾಯುಕ್ತರ ಪದಚ್ಯುತಿಗೆ ಸಂಬಂಧಿಸಿದ ಕಾರ್ಯವಿಧಾನವನ್ನು ಪರಿಷ್ಕರಿಸುವುದಕ್ಕೆ, ಲೋಕಾಯುಕ್ತರನ್ನು ಅಥವಾ ಉಪ ಲೊಕಾಯುಕ್ತರನ್ನು ಪದಚ್ಯುತಿಗೊಳಿಸುವ ಗೊತ್ತುವಳಿಯು ರಾಜ್ಯ ವಿಧಾನಮಂಡಲದ ಸದನದ ಅಥವಾ ಸದನಗಳ ಮುಂದೆ ಬಾಕಿ ಇರುವ ಅವಧಿಯಲ್ಲಿ ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವರನ್ನು ತಡೆಯುವುದಕ್ಕೆ, ಲೋಕಾಯುಕ್ತರು ಪ್ರತಿ ವರ್ಷದ ವಾರ್ಷಿಕ ವರದಿಯನ್ನು ಅದೇ ವರ್ಷದ ಅಕ್ಟೋಬರ್ 31 ರೊಳಗೆ ಸಲ್ಲಿಸಲು ಉಪಬಂಧವನ್ನು ಕಲ್ಪಿಸುವ ಉದ್ದೇಶ ಮತ್ತು ಕಾರಣಗಳನ್ನು ವಿಧೇಯಕ ಒಳಗೊಂಡಿದೆ.

ಬಾಬು:ಜಿಪಿಆರ್

# ಶಿಲ್ಪಕಲೆ ಬಿ.ಎಫ್.ಎ. ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು ಸಾಂಪ್ರದಾಯಿಕ ಶಿಲ್ಪ ಗುರುಕುಲಗಳ ಕೇಂದ್ರವು ಪ್ರಸಕ್ತ ಸಾಲಿನಲ್ಲಿ ಮೂರು ವರ್ಷಗಳ ಅವಧಿಯ ಸಾಂಪ್ರದಾಯಿಕ ಪ್ರತಿಮಾ ಶಿಲ್ಪ ಮತ್ತು ನಾಲ್ಕು ವರ್ಷಗಳ ಅವಧಿಯ ದೇವಾಲಯ ನಿರ್ಮಾಣ ಶಿಲ್ಪದ ಬಿ.ಎಫ್.ಎ. ಪದವಿ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಎರಡು ವರ್ಷಗಳ ಸಾಂಪ್ರದಾಯಿಕ ಶಿಲ್ಪಕಲೆಯ ಫೌಂಡೇಷನ್ ಕೋರ್ಸ್‌ಗೆ ಪ್ರವೇಶ ಬಯಸುವವರು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾಗಿರಬೇಕು. ಫೌಂಡೇಷನ್ ಕೋರ್ಸ್ ಪಾಸಾದವರು ಸಾಂಪ್ರದಾಯಿಕ ಶಿಲ್ಪದಲ್ಲಿ ಮೂರು ವರ್ಷಗಳ ಪದವಿ ಕೋರ್ಸ್‌ಗೆ ಸೇರುವ ಅರ್ಹತೆಯನ್ನು ಹೊಂದಿರುತ್ತಾರೆ. ಸಾಂಪ್ರದಾಯಿಕ ಪ್ರತಿಮಾ ಶಿಲ್ಪದ ಅಧ್ಯಯನಕ್ಕೆ ವಿದ್ಯಾರ್ಥಿಗೆ 19 ವರ್ಷ ಆಗಿರಬೇಕು ಮತ್ತು ಸಾಂಪ್ರದಾಯಿಕ ಶಿಲ್ಪಿಗಳಲ್ಲಿ ಅಥವಾ ಸಾಂಪ್ರದಾಯಿಕ ಶಿಲ್ಪ ತರಬೇತಿ ನೀಡುವ ಸಂಸ್ಥೆಗಳಲ್ಲಿ ಶಿಲ್ಪಾಭ್ಯಾಸ ಮಾಡಿರಬೇಕು. ಇದರೊಂದಿಗೆ ಸಾಂಪ್ರದಾಯಿಕ ಶಿಲ್ಪಿಗಳಲ್ಲಿ ಕನಿಷ್ಠ 3 ವರ್ಷ ಶಿಲಾಭ್ಯಾಸವನ್ನು ಮಾಡಿರಬೇಕು. ಕನ್ನಡ ಓದಲು ಮತ್ತು ಬರೆಯಲು ಚೆನ್ನಾಗಿ ಬರಬೇಕು. ದೇವಾಲಯ ಶಿಲ್ಪ ನಿರ್ಮಾಣವನ್ನು ಆಧ್ಯಯನ ಮಾಡಲು ಸಾಂಪ್ರದಾಯಿಕ ಪ್ರತಿಮಾ ಶಿಲ್ಪದ ಪದವಿ ಪರೀಕ್ಷೆಯಲ್ಲಿ ಪಾಸಾಗಿರಬೇಕು ಅಥವಾ ಪಿ.ಯು.ಸಿ. ಪಾಸಾಗಿದ್ದು ಸಾಂಪ್ರದಾಯಿಕ ಪ್ರತಿಮಾ ಶಿಲ್ಪಿಯ ಬಳಿ ಮೂರು ವರ್ಷ ಶಿಷ್ಯನಾಗಿ ಕೆಲಸ ಮಾಡಿರುವ ಅನುಭವ ಇರಬೇಕು.

ಅರ್ಹ ವಿದ್ಯಾರ್ಥಿಗಳು ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ರೂ 15/- ಅಂಚೆ ಸ್ಟಾಂಪ್ ಲಗತ್ತಿಸಿರುವ 15 X 25 ಸೆಂ.ಮೀ. ಆಕಾರದ ಸ್ವವಿಳಾಸದ ಲಕೋಟೆಯನ್ನು ಕಳುಹಿಸಿ ಪಡೆದುಕೊಳ್ಳಬಹುದು. ಅಥವಾ ಸಾಂಪ್ರದಾಯಿಕ ಶಿಲ್ಪ ಗುರುಕುಲಗಳ ಕೇಂದ್ರ, ಕಾಜಾಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು – 560 056 ಇಲ್ಲಿಗೆ ನೇರವಾಗಿ ಬಂದು ವಿದ್ಯಾರ್ಥಿಯ ವಿವರ ಮತ್ತು ವಿಳಾಸಗಳ ಮಾಹಿತಿಯನ್ನು ಕೊಟ್ಟು ಅರ್ಜಿ/ಮಾಹಿತಿ ಪುಸ್ತಕವನ್ನು ಪಡೆದುಕೊಳ್ಳಬಹುದು.

ಭರ್ತಿಮಾಡಿದ ಅರ್ಜಿಗಳನ್ನು ಅಡಕ ಮತ್ತು ಪ್ರವೇಶ ಶುಲ್ಕದ ಡಿ.ಡಿ. ಗಳೊಂದಿಗೆ ಅರ್ಜಿಯನ್ನು ಆಗಸ್ಟ್ 25 , 2015 ರೊಳಗೆ ಸಲ್ಲಿಸಬಹುದಾಗಿದೆ. ಅವಶ್ಯಕವೆನಿಸಿದರೆ ವಿದ್ಯಾರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಮೌಖಿಕ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಪಲ್ಲವಿ:ಬಾಬು:ಜೆಪಿಆರ್.

# ಒಂದು ವರ್ಷದ ಎಲ್‌ಎಲ್‌ಎಂ. ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯಲ್ಲಿ ಸಂವಿಧಾನ ಮತ್ತು ಆಡಳಿತಾತ್ಮಕ ಕಾನೂನು (Constitutional and Administrative Law) ಔದ್ಯೋಗಿಗಳ ಮತ್ತು ವಾಣಿಜ್ಯ ಕಾನೂನು (Corporate and Commercial Law) .ವಿಷಯಗಳಲ್ಲಿ ಒಂದು ವರ್ಷದ ಎಲ್‌ಎಲ್.ಎಂ. ಕೋರ್ಸ್‌ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಪ್ರವೇಶ ಬಯಸುವ ವಿದ್ಯಾರ್ಥಿಗಳು ಕಾನೂನು ಪದವಿಯಲ್ಲಿ ಕನಿಷ್ಠ 45% ರಷ್ಟು ಅಂಕಗಳನ್ನು ಪಡೆದಿರಬೇಕು (ಪ.ಜಾ. ಮತ್ತು ಪ.ಪಂ. ಅಭ್ಯರ್ಥಿಗಳು 40% ಅಂಕಗಳನ್ನು ಪಡೆದಿರಬೇಕು) ಫಲಿತಾಂಶಕ್ಕಾಗಿ ಕಾಯುತ್ತಿರುವ ವಿದ್ಯಾರ್ಥಿಗಳು ಸಹ ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಕನಿಷ್ಠ ವಿದ್ಯಾರ್ಹತೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ ಭೋಧನೆ/ಸಂಶೋಧನೆಯಲ್ಲಿ ಇರುವ ಆಸಕ್ತಿ ಕಾನೂನು ವಿಷಯಗಳಲ್ಲಿರುವ ಜ್ಞಾನ ಇವೇ ಮುಂತಾದವುಗಳನ್ನು ಪರೀಕ್ಷಿಸಲಾಗುವುದು.

ಅರ್ಜಿಯ ನಮೂನೆಗಳನ್ನು ಈ ವಿಶ್ವವಿದ್ಯಾಲಯದ ಕಾನೂನು ಶಾಲೆಯ ಕಚೇರಿಯಿಂದ ಅಥವಾ ವಿಶ್ವವಿದ್ಯಾಲಯದ ಅಂತರ್ಜಾಲ www.kslu.ac.in ದಿಂದ ಪಡೆಯಬಹುದಾಗಿದೆ. ಅರ್ಜಿಯ ಶುಲ್ಕ ರೂ. 500/- ಪ.ಜಾ.ಪ.ಪಂ ಹಾಗೂ ಪ್ರವರ್ಗ-1 ರ ವಿದ್ಯಾರ್ಥಿಗಳು ರೂ 250/-) ಗಳನ್ನು ಹಣಕಾಸು ಅಧಿಕಾರಿಗಳು ಕ.ರಾ.ಉ.ವಿ. ಹುಬ್ಬಳ್ಳಿ ಇವರ ಹೆಸರನಲ್ಲಿ ಡಿ.ಡಿ./ಚಲನ್ ಮೂಲಕ ಪಾವತಿಸಬೇಕು. ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ 10-08-2015 ಒಳಗೆ ನಿರ್ದೇಶಕರು, ಕಾನೂನು ಶಾಲೆ, ಕ.ರಾ.ಕಾ.ವಿ. ಹುಬ್ಬಳ್ಳಿ ಇವರಿಗೆ ಸಲ್ಲಿಸಬೇಕು. ಈ ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿ ದಿನಾಂಕ 11-08-2015 ರಂದು ಬೆಳಿಗ್ಗೆ 9-00 ಗಂಟೆಯಿಂದ 11-30 ಗಂಟೆಯವರೆಗೆ ಲಿಖಿತ ಪರೀಕ್ಷೆಯನ್ನು ಹಾಗೂ 12-00 ಗಂಟೆಯ ನಂತರ ಮೌಖಿಕ ಪರೀಕ್ಷೆಯನ್ನು ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0836-2222792, 09480912492 ಹಾಗೂ E-mail.ksluluw.school@gmail.com Website www.kslu.ac.in ಮೂಲಕ ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

# ನಕ್ಷತ್ರ ವೀಕ್ಷಣೆ ಕಾರ್ಯಕ್ರಮ

ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)

ಬೆಂಗಳೂರಿನ ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ಸಂಸ್ಥೆಯು ಟಿ. ಚೌಡಯ್ಯ ರಸ್ತೆಯ ಹೈಗ್ರೌಂಡ್ಸ್‌ನಲ್ಲಿರುವ ಜವಹಾರಲಾಲ್ ನೆಹರೂ ತಾರಾಲಯದಲ್ಲಿ ಆಗಸ್ಟ್ 2 ರ ಭಾನುವಾರ ಸಂಜೆ 6–30 ಕ್ಕೆ ನಕ್ಷತ್ರ ವೀಕ್ಷಣೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 2237 9725 / 2226 6084 ಅಥವಾ http://www.taralaya.org/month-sky-chart.phg ಅನ್ನು ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

# ಎಸ್. ವಿದ್ಯಾಶಂಕರ್ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)

ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರ ನಿರ್ದೇಶಕ, ಲೇಖಕ ಎಸ್.ವಿದ್ಯಾಶಂಕರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಸಂಶೋಧನೆ, ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ ಅಪಾರವಾಗಿ ಶ್ರಮಿಸಿರುವ ಇವರು ವಚನಾನುಶೀಲನ, ನಂಬಿಣ್ಣ ಒಂದು ಅಧ್ಯಯನ, ನೆಲದಮರೆಯ ನಿಧಾನ ಮೊದಲಾದ ಮಹತ್ವದ ಸಂಶೋಧನಾ ಗ್ರಂಥಗಳನ್ನು ರಚಿಸಿದರು. ಮೃತರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಮುಖ್ಯಮಂತ್ರಿಗಳು ತಮ್ಮ ಸಂತಾಪದಲ್ಲಿ ತಿಳಿಸಿದ್ದಾರೆ.

:ಬಾಬು:ಜಿಪಿಆರ್.